# 2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯಃ

## ಉತ್ತರ ಕನ್ನಡ : ಕಾರವಾರ

**ಎಸ್.ಸಿ. ನಂ. 36/2014**

**ದೋ.ಸಾ. : 44 ಪ್ರಾ.ಸಾ. : 21**

| | | |
|---|---|---|
| ಸಾಕ್ಷಿಯ ಹೆಸರು | : | ಪ್ರಕಾಶ ರಾಘೋಬಾ ಸಾವಂತ್ |
| ತಂದೆಯ ಹೆಸರು | : | ರಾಘೋಬಾ ಸಾವಂತ್ |
| ವಯಸ್ಸು | : | 69 ವರ್ಷ |
| ಕೆಲಸ | : | ನಿವೃತ್ತ ಉಪ ತಹಶೀಲ್ದಾರ |
| ವಾಸ | : | ಬಾಡ, ಸಾವಂತವಾಡ, ಕಾರವಾರ |

**ದಿನಾಂಕಃ 17-12-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದ**

1. ದಿಃ 06-08-2012 ರಿಂದ 30-05-2015 ರ ವರೆಗೆ ನಾನು ಘಾಡಸಾಯಿ ಹಳಗಾದಲ್ಲಿ ಉಪ ತಹಶೀಲ್ದಾರನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿಃ 02-04-2014 ರಂದು ಕದ್ರಾ ಪೊಲೀಸ್ ವೃತ್ತ ನಿರೀಕ್ಷಕರು ಕೋರಿಕೆ ಪತ್ರವನ್ನು ನೀಡಿದ್ದು, ಅದರಲ್ಲಿ ಕದ್ರಾದ ರಾಜೀವನಗರದ ಉತ್ತರದ ದಿಕ್ಕಿಗೆ ಇರುವ ಜಮೀನು ಯಾವ ಸರ್ವೆ ನಂಬರ್ ಹಾಗೂ ಅದು ಯಾರ ಮಾಲೀಕತ್ವದಲ್ಲಿರುತ್ತದೆ ಎಂಬ ಬಗ್ಗೆ ಮಾಹಿತಿ ನೀಡುವಂತೆ ಕೋರಿದ್ದು, ಅದರಂತೆ ನಾನು ನಮ್ಮ ಗ್ರಾಮ ಸಹಾಯಕರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿ ನೋಡಿದ್ದು, ಸದರಿ ಜಾಗವು ಅರಣ್ಯ ಇಲಾಖೆಗೆ ಸೇರಿದ ಜಾಗವಾಗಿದ್ದು ಹಾಗೂ ಅದರ ಸರ್ವೆ ನಂಃ 71 ಆಗಿರುತ್ತದೆ. ಈ ಬಗ್ಗೆ ನಾನು ದಿಃ 09-05-2014 ರಂದು ಸರ್ವೆ ನಂಃ 71 ರ ಪಹಣಿ ಪತ್ರಿಕೆಯನ್ನು ಕವಚ ಪತ್ರದೊಂದಿಗೆ ಕದ್ರಾ ಪೊಲೀಸ್ ವೃತ್ತ ನಿರೀಕ್ಷಕರಿಗೆ ನೀಡಿರುತ್ತೇನೆ. ಸಾಕ್ಷಿಯು ತನಗೆ ಬಂದ ಕೋರಿಕೆ ಪತ್ರವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-54 ಎಂದು, ಸಾಕ್ಷಿಯ ಸಹಿಯನ್ನು ನಿಪಿ-54(ಎ) ಎಂದು, ಸಾಕ್ಷಿಯು ತಾನು ನೀಡಿದ ಪಹಣಿ ಪತ್ರಿಕೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-55 ಎಂದು, ಕವಚ ಪತ್ರವನ್ನು ನಿಪಿ-56 ಎಂದು, ಸಾಕ್ಷಿಯ ಸಹಿಯನ್ನು ನಿಪಿ-56(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ  ಆರೋಪಿ ಪರ ಶ್ರೀ ಎ.ಎ.ಎ.ವಕೀಲರಿಂದ**

ಪಾಟೀ ಸವಾಲು ಇರುವುದಿಲ್ಲ ಎಂದು ಹೇಳಿರುತ್ತಾರೆ

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ.)

ಓ.ಹೇ.ಕೇ.ಸ.ಇ.

ಸಹಿ ಇದೆ/-

(ಮಾಯಣ್ಣ ಬಿ.ಎಲ್.)

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಉತ್ತರಕನ್ನಡ, ಕಾರವಾರ